ರಾಮ್‌ಚರಣ್ ಮತ್ತು ಜ್ಯೂನಿಯರ್ ಎನ್‌ಟಿಆರ್ ಜೋಡಿ ಮಾಡಿದ ಮೋಡಿಯ ಬೆಲೆ ಸಾವಿರ ಕೋಟಿ ರೂಪಾಯಿಗಳನ್ನು ದಾಟಿದೆ



ಎನ್ನುವುದನ್ನು ವರ್ಮಾ ಅವರ ವ್ಯಂಗ್ಯೋಕ್ತಿ ಹೇಳುತ್ತಿದೆ. ರಾಜಮೌಳಿ, ಸುಕುಮಾರ್, ಪ್ರಶಾಂತ್ ನೀಲ್ – ಈ ಮೂವರೂ ನಿರ್ದೇಶಕರ ದೃಶ್ಯರುಜುಗಳನ್ನು ಬಗೆದು ನೋಡುವವರಲ್ಲಿ ಬಾಲಿವುಡ್‌ನ 'ತಾರಾನಟರೂ' ಇದ್ದಾರೆ. ಈ ತಾರೆಗಳಲ್ಲಿ ಕೆಲವರು ಈಗ ಹೊಳೆಯಲು ಪರದಾಡುತ್ತಿರುವುದೂ ದಿಟ.

## ಕೋವಿಡ್ ಆಸುಪಾಸಿನಲ್ಲಿ...

'ಕೆಜಿಎಫ್' ಮೊದಲ ಭಾಗದ ಮೂಲಕ ಇಡೀ ದೇಶದಾದ್ಯಂತ ಬೇಡಿಕೆ ಸೃಷ್ಟಿಸಿಕೊಳ್ಳಲಾಗಿತ್ತು. ಆದರೆ, ಪ್ರಸ್ತುತ ಎರಡನೇ ಭಾಗಕ್ಕೆ ದೊರೆತಿರುವಂತಹ ಪ್ರತಿಕ್ರಿಯೆ ಅದಕ್ಕೆ ಸಂದಿರಲಿಲ್ಲ. ಅದರಲ್ಲೂ ತಮಿಳಿನಲ್ಲಿ ಆ ಸಿನಿಮಾ ಗಳಿಕೆ ಅಂದುಕೊಂಡ ಮಟ್ಟಕ್ಕೆ ಇರಲಿಲ್ಲ ಎಂದು ಚಿತ್ರೋದ್ಯಮದ ಒಳಸುಳಿಗಳನ್ನು ಬಲ್ಲವರು ಹೇಳಿದ್ದರು. ಕೋವಿಡ್ ಅಲೆಗಳು ಎದ್ದು, ಇಳಿದ ಮೇಲೆ ಜನರು ವ್ಯಾಕುಲದಿಂದ ಹೊರಬರಲು ಹೆಚ್ಚೇ ಕಾಲ ತೆಗೆದುಕೊಂಡರು. ಒಟಿಟಿ ವೇದಿಕೆಗಳಲ್ಲಿ ಆಗ ಮಲಯಾಳಂ ಸಿನಿಮಾ ವಸ್ತುವಿಷಯಗಳು ಹೆಚ್ಚು ಚರ್ಚಿತವಾದವು. ಫಹಾದ್ ಫಾಸಿಲ್ ತರಹದ ನಟರು ತಮ್ಮದೇ ನಿರ್ಮಾಣ ಸಂಸ್ಥೆಯ ಮೂಲಕ ಮಾಡಿದ ಪ್ರಯೋಗಗಳನ್ನು ದೇಶ–ವಿದೇಶಗಳ ಸಿನಿಮಾ ವಿದ್ಯಾರ್ಥಿಗಳು ನೋಡಿ ಸುಖಿಸಿದರು. ಹೊಸಕಾಲಮಾನದ, ಕೋವಿಡ್ ಸಂದರ್ಭದ ಸವಾಲನ್ನು ಮೆಟ್ಟಿನಿಂತೂ ಮಣ್ಣಿನ ಸಿನಿಮಾಗಳನ್ನು ಅವರು ತಯಾರಿಸಿದ ಬಗೆಗೆ ತಲೆದೂಗಿದರು. 'ಸೀ ಯೂ ಸೂನ್' ತರಹದ, ಐ–ಫೋನ್ ಮೊಬೈಲ್‌ನಲ್ಲೇ ಚಿತ್ರೀಕರಿಸಿದ ಸಿನಿಮಾ ಒಟಿಟಿಯಲ್ಲಿ ಬಿಡುಗಡೆಯಾದದ್ದು ಸಣ್ಣ ಮಾರುಕಟ್ಟೆಯಲ್ಲೂ ಹೇಗೆ ಸಂಚಲನ ಮೂಡಿಸಬಹುದೆನ್ನುವುದಕ್ಕೆ ಉದಾಹರಣೆ.

ಈಗ ಫಹಾದ್ ಫಾಸಿಲ್ ದಕ್ಷಿಣ ಭಾರತದ ಇತರ ಮುಖ್ಯವಾಹಿನಿ ಚಿತ್ರನಿರ್ಮಾತೃಗಳ ಕಣ್ಣಿಗೂ ಬಿದ್ದಿದ್ದಾರೆ. 'ಪುಷ್ಪಾ–ದಿ ರೈಸ್'ನ ಕೊನೆಯ ಕೆಲವು ನಿಮಿಷಗಳಲ್ಲಿ ಜನರು ಅವರ ಅಭಿನಯ ಕೌಶಲ ಕಂಡಿದ್ದು, ಮುಂದಿನ ಭಾಗದಲ್ಲಿ ಅವರು ಹೇಗೆಲ್ಲ ತೆರೆಯನ್ನು ಆವರಿಸಿಕೊಳ್ಳಬಹುದೆನ್ನುವ ಕುತೂಹಲ ಮೂಡಿದೆ. ಲೋಕೇಶ್ ಕನಕರಾಜ್ ನಿರ್ದೇಶಿಸುತ್ತಿರುವ, ಕಮಲ ಹಾಸನ್ ಅಭಿನಯದ 'ವಿಕ್ರಂ' ಚಿತ್ರದಲ್ಲಿ ಫಹಾದ್ ಅವರಷ್ಟೇ ಅಲ್ಲದೆ, ತಮಿಳಿನ ಇನ್ನೊಬ್ಬ ಪ್ರತಿಭಾವಂತ ನಟ ವಿಜಯ್ ಸೇತುಪತಿ ಸಹ ಇದ್ದಾರೆ.

ಶಂಕರ್ ನಿರ್ದೇಶನದ 'ಕಾದಲನ್' ಮತ್ತು 'ಇಂಡಿಯನ್' ಸಿನಿಮಾಗಳು ದೇಶದ ಉದ್ದಗಲಕ್ಕೂ ಸದ್ದು ಮಾಡಿದ್ದವು. ಆದರೆ, ಆಗ ಆ ಚಿತ್ರಗಳನ್ನು 'ಪ್ಯಾನ್ ಇಂಡಿಯಾ' ಎಂದು ಯಾರೂ ಕರೆದಿರಲಿಲ್ಲ. ರಜನೀಕಾಂತ್ ಅಭಿನಯದ 'ರೋಬೊ' ತೆರೆಕಂಡ ಮೇಲೆ ಬೇರೆ ಭಾಷೆಗಳಿಗೆ ಡಬ್ಬಿಂಗ್ ಆದ ಚಿತ್ರಗಳನ್ನೂ ಜನರು ದೊಡ್ಡ ಸಂಖ್ಯೆಯಲ್ಲಿ ನೋಡಿದರು. 'ಮಗಧೀರ', 'ಈಗ' ಚಿತ್ರಗಳ ಚಿಮ್ಮುಹಲಗೆಯಿಂದ ಜಿಗಿದ ರಾಜಮೌಳಿ 'ಬಾಹುಬಲಿ' ಸರಣಿ ಚಿತ್ರಗಳಿಂದ ದೊಡ್ಡ ಮಾರುಕಟ್ಟೆಯನ್ನು ದೇಶದ ಉದ್ದಗಲಕ್ಕೂ ಸೃಷ್ಟಿಸಿಕೊಂಡರು. ಹಿಂದಿಯ ನಿರ್ಮಾಪಕ ಕರಣ್ ಜೋಹರ್ ಅವರೇ ಹಿಂದಿ ಅವತರಣಿಕೆಯ ಹಕ್ಕುಗಳನ್ನು ಖರೀದಿಸಿರುವುದು ದಕ್ಷಿಣ ಭಾರತದ ಚಿತ್ರಗಳ ಮೇಲೆ ಅವರಿಗೂ ಎಂತಹ ಮೋಹವಿದೆ ಎನ್ನುವುದಕ್ಕೆ ಸಾಕ್ಷ್ಯ.

## ಹಿಂದಿಯಲ್ಲೀಗ ಯಾರು ಸ್ಟಾರ್?

ದಕ್ಷಿಣ ಭಾರತದ ಸಿನಿಮಾಗಳು ಹೊಸಬೆಳಕಿಗೆ ತಮ್ಮನ್ನು ಒಡ್ಡಿಕೊಳ್ಳುತ್ತಿರುವ ಸಂದರ್ಭದಲ್ಲೇ, ಬಾಲಿವುಡ್ ರೀಮೇಕ್‌ಗಳನ್ನು ಉಜ್ಜುವುದನ್ನು ಬಿಡದಿರುವುದನ್ನು ಗಮನಿಸಬೇಕು. 'ಜಿಗರ್‌ಥಂಡ' ತಮಿಳಿನ ಹಾಸ್ಯಮಯ ಗ್ಯಾಂಗ್‌ಸ್ಟರ್ ಚಿತ್ರ. ಅದು ದಕ್ಷಿಣದ ಇತರ ಭಾಷೆಗಳಲ್ಲೂ ರೀಮೇಕ್ ಆಗಿ ಗೆದ್ದಾದ ಮೇಲೆ ಇತ್ತೀಚೆಗೆ 'ಬಚ್ಚನ್ ಪಾಂಡೆ' ಹೆಸರಿನಲ್ಲಿ ಹಿಂದಿಯಲ್ಲೂ ತೆರೆಕಂಡಿತು. ಅಕ್ಷಯ್ ಕುಮಾರ್ ಅಭಿನಯದ ಈ ಚಿತ್ರ ಅಂದುಕೊಂಡ ಮಟ್ಟಕ್ಕೆ ಸದ್ದು ಮಾಡಲಿಲ್ಲ. ಈಗ ಅದು ಸಾಲದೆಂಬಂತೆ 'ಸೂರಾರೈ ಪೋಟ್ರು' ತಮಿಳು ಚಿತ್ರದ ರೀಮೇಕ್‌ನಲ್ಲಿ ಅಕ್ಷಯ್ ನಟಿಸುವುದು ನಿಕ್ಕಿಯಾಗಿದೆ. ತಾರಾ ವರ್ಚಸ್ಸು

## ಚಿಕ್ಕ ಪ್ರಾಯದ ಸಂಕಲನಕಾರ

'ಕೆಜಿಎಫ್ 2' ಸಿನಿಮಾದ ಸಂಕಲನಕಾರ ಉಜ್ವಲ್ ಕುಲಕರ್ಣಿ ಈಗ ಎಷ್ಟೋ ಯುವಕರಿಗೆ, ಚಿತ್ರರಂಗಕ್ಕೆ ಪದಾರ್ಪಣೆ ಮಾಡಬೇಕೆಂಬ ಉತ್ಸಾಹದಲ್ಲಿ ಇರುವವರಿಗೆ ಪ್ರೇರಣೆಯಾಗಿದ್ದಾರೆ. ಅವರಿಗೀಗ ಬರೀ ಹತ್ತೊಂಬತ್ತು ವರ್ಷ ವಯಸ್ಸು. ಹದಿನಾರನೇ ವಯಸ್ಸಿನಲ್ಲಿದ್ದಾಗ ಪ್ರಶಾಂತ್ ನೀಲ್ ಅವರನ್ನು ಹೆಕ್ಕಿದರು. ಅಭಿಮಾನಿಯಂತೆ ಅವರು ಮಾಡುತ್ತಿದ್ದ ವಿಡಿಯೊಗಳನ್ನು ನೋಡಿಯೇ ಇಂತಹುದೊಂದು ಅವಕಾಶ ಕೊಟ್ಟರು. 'ಕೆಜಿಎಫ್2'ನಲ್ಲಿ ಕಾರಿನ ಚೇಸ್ ಸನ್ನಿವೇಶದಲ್ಲಿನ ವಿಚಿತ್ರವಾದ ಕಟ್‌ಗಳನ್ನು ಗಮನಿಸಿದವರು, 'ಅದು ಏನು, ಯಾಕೆ' ಎಂದು ತಲೆಯಲ್ಲಿ ಹುಳ ಬಿಟ್ಟುಕೊಂಡು ಓಡಾಡುತ್ತಿದ್ದಾರೆ. ಇಂತಹ 'ಮಿಥ್'ಗಳನ್ನು ಉಜ್ವಲ್ ತಮ್ಮ ಕಟ್ಸ್ ಮೂಲಕ ಸೃಷ್ಟಿಸಿದ್ದಾರೆ. ಯುವಕರ ನಾಡಿಮಿಡಿತವನ್ನು ಇಂತಹ ಬಿಸಿರಕ್ತದ ಹುಡುಗರು ಚೆನ್ನಾಗಿ ಅರಿತಿರುತ್ತಾರೆ ಎನ್ನುವುದು ನಿರ್ದೇಶಕ ಪ್ರಶಾಂತ್ ನೀಲ್ ನಂಬಿಕೆ ಇರಬೇಕು. ಅದು ಈಗ ಒಳ್ಳೆಯ ಫಲವನ್ನೇ ನೀಡಿದೆ. ನಿರ್ಮಾಪಕ ವಿಜಯ್ ಕಿರಗಂದೂರ್ ಅವರ ಸಹೋದರ ಕಾರ್ತಿಕ್ ಗೌಡ ಅವರು, 'ಅವನಿನ್ನೂ ಚಿಕ್ಕ ಹುಡುಗ, ಪ್ರಬುದ್ಧವಾಗಿ ಮಾತನಾಡಲಾರ' ಎಂದು ಸಂಪರ್ಕ ಒದಗಿಸಲು ನಿರಾಕರಿಸಿದರು. 'ಸಲಾರ್' ಸಿನಿಮಾಗೂ ಸಂಕಲನ ಮಾಡುವ ಅವಕಾಶವನ್ನು ಈ ಹುಡುಗನಿಗೆ ಪ್ರಶಾಂತ್ ಒದಗಿಸಿದ್ದಾರೆ. ಕ್ರಿಸ್ಟೋಫರ್ ನೋಲನ್‌ನ ಅಭಿಮಾನಿ ತಾನೆಂದು ಹೇಳಿಕೊಳ್ಳುವ ಉಜ್ವಲ್‌ಗೆ ಒಲಿದಿರುವ ಅದೃಷ್ಟ ಅನೇಕ ಹುಡುಗರ ಕಣ್ಣರಳಿಸಿದೆ. ಉತ್ಸಾಹವನ್ನೂ ಇಮ್ಮಡಿ ಮಾಡಿದೆ.